ದಿನಾಂಕಃ 27.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಸಿ ಹಚ್ ಕೆ ಅವರಿಂದ**

1. ನಾನು ಕೆಇಬಿ ಅಲ್ಲೆ ಕೆಲಸ ಮಾಡುತ್ತಿದ್ದೇನೆ. ಅಪಘಾತಾವು 11.06.2019 ರಂದು ರಾತ್ರಿ 9.40 ಗಂಟೆಗೆ ಆಗಿರತ್ತುದೆ. ಅಷ್ಟೊತ್ತಿಗೆ ರಾತ್ರಿ ಕರ್ತವ್ಯದಲ್ಲಿ ಇದ್ದೆ ಎಂದು ದಾಖಲಾತಿ ಹಾಜರು ಪಡಿಸಿರುತ್ತೇನೆ. ಆ ದಿನ ನನಗೆ ನನ್ನ ಶಾಖಾಧಿಕಾರಿ ಕೃಷ್ಣ ಕುಮಾರ್ ಕಂಬ ಕಟ್ಟುವ ಜಾಗಕ್ಕೆ ಹೋಗಬೇಕೆಂದು ಹೇಳಿದ್ದರು. ಆ ದಿನ ನಾವು ರಸ್ತೆಯ ಮೇಲೆ ಕೆಲಸ ಮಾಡುತ್ತಿದ್ದಾಗ ರಸ್ತೆಗೆ ಅಡ್ಡಲಾಗಿ ಮರದ ಸೊಪ್ಪು ಇಟ್ಟು ಕೆಲಸ ಮಾಡುತ್ತಿದ್ದೆವು. ಆ ದಿನ ಸಮಯದಲ್ಲಿ ಕಣ್ಣಿಗೆ ಕಾಣುವಂತಹ ಸೂಚನಾ ಫಲಕವನ್ನು ಇಟ್ಟು ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ಆದರೆ ಮರದ ಸೋಪ್ಪು ಇಟ್ಟಿದ್ದೆವು. ವಾಹನವು ನಮ್ಮ ಬಳಿ ಬಂದಿರುವುದನ್ನು ನಾನು ನೋಡಿರಲಿಲ್ಲ. ಸದರಿ ವಾಹನ ನಾವು ರಸ್ತೆಗೆ ಅಡ್ಡಲಾಗಿ ಇಟ್ಟಿದ್ದ ಮರದ ಸೊಪ್ಪಿಗೆ ಗುದ್ದಿರುತ್ತದೆ ಎಂದರೆ ಕಂಬ ಮತ್ತು ವುರಕ್ಕೆ ಗುದ್ದಿರುತ್ತದೆ ಎಂದುಕಿ ಸಾಕ್ಷಿ ಹೇಳುತ್ತಾರೆ.

2. ಆನ ದಿನ ನಮ್ಮ ಶಾಖಾಧಿಕಾರಿ ಸರ್ಕಾರಿ ಆಸ್ಪತ್ರೆ ಗೋಣಿಕೊಪ್ಪ ಕರೆದುಕೊಂಡು ಹೋಗಿದ್ದರು . ನಿಪಿ –7 ನನ್ನ ಶಾಖಾಧಿಕಾರಿ ವೈದ್ಯರ ಮುಂದೆ ನೀಡಿದ ಹೇಳಿಕೆ ಎಂದರೆ ಸರಿ. ನಿಪಿ–7 ರಲ್ಲಿ ನಾನೇ ಮರದಿಂದ ಬಿದ್ದು ಕಾಲಿಗೆ ಏಟು ಮಾಡಿಕೊಂಡಿರುತ್ತೇನೆ ಎಂದು ನಮೂದಾಗಿರುತ್ತದೆ ಎಂದರೆ ಅದು ಸುಳ್ಳು ಎಂದು ಸಾಕ್ಷಿ ಹೇಳುತ್ತಾರೆ ಸದರಿ ಕೃಷ್ಣ ಕುಮಾರ್ ರಿಗೆ ವಿಚಾರಣೆ ಮಾಡಲು ತೊಂದರೆ ಇಲ್ಲ.

3. ಆ ದಿನ ವೈದ್ಯರಾದ ಸುರೇಶ್ ನನಗೆ ಚಿಕಿತ್ಸೆನೀಡಿರುತ್ತಾರೆ. ವೈದ್ಯರು ಪೋಲೀಸರಿಗೆ ಎಂ ಎಲ್ ಸಿ ವರದಿ 89765 /11-06-2019 ರಲ್ಲಿಯೂ ಸಹ ವೈದ್ಯರು ನಾನು

ಕೆಲಸ ಮಾಡುವಾಗ ಮರದಿಂದ ಬಿದ್ದು ಕಾಲಿಗೆ ಏಟು ಮಾಡಿಕೊಂಡಿರುತ್ತೇನೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಅದು ತಪ್ಪು ಎಂದು ಸಾಕ್ಷಿ ಹೇಳುತ್ತಾರೆ. ನಾನೇ ಹಾಜರುಪಡಿಸಿದ ದಾಖಲಾತಿಗಳಲ್ಲಿ ತಪ್ಪು ಮಾಹಿತಿ ನಮೂದು ಮಾಡಲಾಗಿದೆ ಎಂದರೆ ಸರಿ. ಸದರಿ ವೈದ್ಯರು ಮತ್ತು ನನ್ನ ಶಾಖಾಧಿಕಾರಿಗಳನ್ನು ವಿಚಾರಣೆ ಮಾಡಿಸುತ್ತೇನೆ.

4. ಯಾವುದೇ ಕಾರು ಬಂದು ನನಗೆ ಗುದ್ದಿಲ್ಲ ನಾನು ನಿರ್ಲಕ್ಷತನದಿಂದ ಮರದಿಂದ ಬಿದ್ದು ಏಟು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾನು 6 ತಿಂಗಳವರೆಗೆ ಚಿಕಿತ್ಸೆ ಪಡೆದಿರುತ್ತೇನೆ. ಆ ಸಮಯದಲ್ಲಿ ನನಗೆ ಸಂಬಳ ಬರುತ್ತಿತ್ತು ಎಂದರೆ ಸರಿ. ಈಗಲೂ ಕೂಡ ನಾನು ಡ್ಯುಟಿಗೆ ಹೋಗುತ್ತಿದ್ದೇನೆ ಎಂದರೆ ಸರಿ ಸಪೋರ್ಟ್ ಇಲ್ಲದೇ ನಡೆಯಲು ಆಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಈಗಲೂ ಕೂಡ ನನಗೆ ನಿತ್ಯ ಕೆಲಸ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ ನನಗೆ ಯಾವುದೇ ದೈಹಿಕ ನ್ಯೂನತೆ ಇಲ್ಲ ಎಂದರೆ ಸರಿಯಲ್ಲ. ನಾನು ಈಗಾಗಲೇ ನನ್ನ ಇಲಾಖೆಯಿಂದ ವೈದ್ಯಕೀಯ ಖರ್ಚನ್ನು ಪಡೆದಿರುತ್ತೇನೆ ಎಂದರೆ ಸರಿ. ನನ್ನ ತಪ್ಪಿನಿಂದ ನನಗೆ ಏಟಾಗಿದ್ದರಿಂದ ಎದುರುದಾರರು ನನಗೆ ಪರೀಹಾರ ನೀಡಲು ಭಾಧ್ಯಸ್ಥರಲ್ಲ ಎಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.